ಪ್ರತಿಭಾವಂತರಾಗಿ, ಸ್ವಂತಿಕೆಯುಳ್ಳ ಲೇಖಕರಾಗಿ ರೂಪುಗೊಂಡ ಅವರ ಬಗ್ಗೆ ಅಭಿಮಾನವುಂಟಾಯಿತು. ಅವರು ಬಳಸುತ್ತಿದ್ದ ಶಿವಮೊಗ್ಗ ಜಿಲ್ಲೆಯ ಹಳ್ಳಿಯ ಭಾಷೆಗೂ ನಮ್ಮ ಧಾರವಾಡ ಜಿಲ್ಲೆಯ ಹಳ್ಳಿಯ ಭಾಷೆಗೂ ಇರುವ ಸಾಮ್ಯ ನನಗೆ ಅಚ್ಚರಿಯುಂಟುಮಾಡಿತು.

* * *

1965ರಲ್ಲಿ ಕೇರಳದ ಎರ್ನಾಕುಲಂನಲ್ಲಿ ನಡೆದ ಅಖಿಲ ಭಾರತ ಲೇಖಕರ ಸಮ್ಮೇಳನದಲ್ಲಿ ಕನ್ನಡದ ಬಹುತೇಕ ನವ್ಯ ಲೇಖಕರು ಭಾಗವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ನಾನೂ ಆ ಸಮ್ಮೇಳನಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ ಲಂಕೇಶ್ ಜೊತೆ ಹೆಚ್ಚು ಒಡನಾಟಕ್ಕೆ ಅವಕಾಶ ಒದಗಿತು. ಸಭೆಯಲ್ಲಿ ಚರ್ಚೆ ನಡೆಯುವಾಗ, ಹೊರಗೆ ತಿರುಗಾಡುವಾಗ ಹಾಸ್ಯ, ಟೀಕೆ, ವಿನೋದಗಳಲ್ಲಿ ಎಷ್ಟೋ ವಿಷಯಗಳು ಬಂದು ಹೋದದ್ದುಂಟು. ಅವರ 'ದೇಶಭಕ್ತ ಸೂಳೆಮಗನ ಗದ್ಯಗೀತೆ'ಗಿಂತ 'ಅವ್ವ' ಕವಿತೆ ಹೆಚ್ಚು ಮೌಲಿಕವಾದದ್ದೆಂಬ ನನ್ನ ಅನಿಸಿಕೆಯನ್ನು ಆಗ ವ್ಯಕ್ತಪಡಿಸಿದೆ.

ನೇರವಾದ ಮಾತು, ನಿಸ್ಸಂಕೋಚವಾದ ನಡೆ, ಅದೇ ಹೊತ್ತಿಗೆ ಅಕೃತ್ರಿಮವಾದ ಪ್ರೀತಿ, ಸ್ನೇಹ ಅವರ ಸ್ವಭಾವದ ವೈಶಿಷ್ಟ್ಯವೆನಿಸಿತು. ಅವರ ಈ ನೇರ ನಡೆ ಕೆಲವರನ್ನು ತಬ್ಬಿಬ್ಬುಗೊಳಿಸುತ್ತಿದ್ದಂತೆ ತೋರಿತು. ಒಂದು ಮುಂಜಾನೆ ಸಮ್ಮೇಳನದ ಸ್ಥಳಕ್ಕೆ ಬಸ್ಸಿನಲ್ಲಿ ಹೊರಟಾಗ ಲಂಕೇಶರ ಮಗ್ಗುಲಿನಲ್ಲಿ ಜಿ.ಬಿ. ಜೋಶಿ ಕುಳಿತಿದ್ದರು. ನಾನು ಅವರ ಹಿಂದಿನ ಸಾಲಿನಲ್ಲಿ ಕುಳಿತಿದ್ದೆ. ನಾನು ಹೊಸ ನಾಟಕವೊಂದನ್ನು ಬರೆದಿದ್ದೇನೆ, ನಿಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸುತ್ತೀರಾ?' ಎಂದು ಲಂಕೇಶ, ಜೋಶಿಯವರನ್ನು ಕೇಳಿದರು. ಅವರಿಗೆ ಒಮ್ಮೆಲೆ ಏನು ಹೇಳಬೇಕೆಂದು ತೋಚಲಿಲ್ಲವೆಂದು ತೋರುತ್ತದೆ. ಒಂದು ಕ್ಷಣ ತಡೆದು ಸದ್ಯಕ್ಕೆ ಆಗುವುದಿಲ್ಲವೆಂದೋ ಏನೋ ಹೇಳಿದರು.(ಇಪ್ಪತ್ತು ವರ್ಷಗಳ ನಂತರ ನಾನಿದನ್ನು ನೆನೆದುಕೊಂಡಾಗ, ಐವತ್ತು ವರ್ಷ ತುಂಬಿದ ಮ.ಗ. ಮಾಲೆಯ ಬಗ್ಗೆ ಹೆಮ್ಮೆ ಹಾಗೂ ವಿಷಾದ ಎರಡೂ ಉಂಟಾಗುತ್ತದೆ) ಸಮ್ಮೇಳನದ ವ್ಯವಸ್ಥಾಪಕರು ಪ್ರೇಕ್ಷಣೀಯ ಸ್ಥಳಗಳಿಗೂ ನಮ್ಮನ್ನು ಕರೆದೊಯ್ಯುವ ವ್ಯವಸ್ಥೆ ಮಾಡಿದ್ದರು. ಒಂದು ದಿನ ಸುಂದರವಾದ ಕೋವಲಂ ಬೀಚಿನಲ್ಲಿ ನಾವು ಕೆಲವರು ಕುಳಿತುಕೊಂಡಿದ್ದೆವು. ದಂಡೆಯಲ್ಲಿ ಸಣ್ಣ ಸಣ್ಣ ದೋಣಿಗಳಿದ್ದವು. 'ದೋಣಿಯಲ್ಲಿ ಕುಳಿತು ಹೋಗಿ ಬರೋಣವೆ?' ಎಂದು ಲಂಕೇಶ್ ನನ್ನನ್ನು ಕೇಳಿದರು. ನನಗೆ ಹೆದರಿಕೆಯೇನೂ ಇಲ್ಲ, ಈಜಲು ಬರುತ್ತದೆ. ಆದರೆ ಈಗ ಬೇಡ' ಎಂದೆ. 'ನಿಮಗೆ ರಿಸ್ಕ್ ತೆಗೆದುಕೊಳ್ಳುವುದು ಬೇಡ, ಅಲ್ಲವಾ?' ಎಂದರು. ನಾನು ಮುಗುಳ್ನಕ್ಕು ಸುಮ್ಮನಾದೆ.

* * *

1970ರ ನಂತರ ಲಂಕೇಶ ಅನೇಕ ಸಲ ಧಾರವಾಡಕ್ಕೆ ಬಂದು ಹೋಗಿದ್ದಾರೆ. ಶಾಂತಿನಾಥ ದೇಸಾಯಿಯವರ ಜೊತೆಗೆ ಅವರಿಗೆ ಒಳ್ಳೆಯ ಸ್ನೇಹ. ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿದ್ದಾಗ ನಾನೂ ದೇಸಾಯಿಯವರೂ ನೆರೆಹೊರೆಯವರಾಗಿದ್ದವು. "ಹಿಂದೆ, 'ನಡೆದು ಬಂದ ದಾರಿ'ಯಲ್ಲಿ ನಿಮ್ಮಿಬ್ಬರ ಫೋಟೋ ನೋಡಿದಾಗ ನೀವಿಬ್ಬರೂ ಅಣ್ಣತಮ್ಮಂದಿರಂತೆ ಕಂಡುಬಂದಿರಿ" ಎಂದು ಲಂಕೇಶ ನಮಗೆ ಹೇಳುತ್ತಿದ್ದರು.

ಲಂಕೇಶ ಮೊದಲ ಸಲ ನಮ್ಮ ಮನೆಗೆ ಬಂದಾಗಿನ ಪ್ರಸಂಗವೊಂದನ್ನು ನಮ್ಮ ಮನೆಯವರು ಇನ್ನೂ ನೆನಪಿಟ್ಟಿದ್ದಾರೆ. ಜೊತೆಗೆ ಶಾಂತಿನಾಥ ದೇಸಾಯಿ, ರಾಮಚಂದ್ರ ಶರ್ಮ ಮೊದಲಾದವರೂ ಇದ್ದರು. ಎಲ್ಲರೂ ಚಹ ಕುಡಿಯುತ್ತ ಹರಟುತ್ತ ಕುಳಿತಿರುವಾಗ ನಮ್ಮ ಮನೆಯವರು ಲಂಕೇಶರಿಗೆ ಅವರ ಮನೆಯವರ ಹೆಸರೇನೆಂದು ಕೇಳಿದರು. ಲಂಕೇಶ್ ಸ್ವಲ್ಪ ತಡೆದು, ಆಮೇಲೆ ಹೆಸರು ಹೇಳಿದರು. 'ಹೆಸರು ಹೇಳಲಿಕ್ಕೆ ಎಷ್ಟು ನಾಚುತ್ತೀಯಲ್ಲಪ್ಪಾ' ಎಂದು ಶರ್ಮ ಚೇಷ್ಟೆ ಮಾಡಿದರು. 'ನನ್ನನ್ನು ಹೀಗೆ ಹೆಸರು ಹೇಳಲು ಕೇಳಿದವರಲ್ಲಿ ಇವರೇ ಮೊದಲಿಗರು' ಎಂದು ನಕ್ಕರು ಲಂಕೇಶ. ಹಳ್ಳಿಯ ಬಾಳಿನ ಮುಗ್ಧತೆಯ ಅಂಶಗಳು ಅವರಲ್ಲಿ ಹೀಗೆ ಇನ್ನೂ ಉಳಿದುಕೊಂಡಿವೆ. ಅಲ್ಲಿಯ ಹುಂಬತನ ಇವರಲ್ಲಿ ಧೈರ್ಯ, ದಿಟ್ಟತನ, ಅಪಾಯಕ್ಕೆ ಎದೆಯೊಡ್ಡುವಿಕೆಯಲ್ಲಿ ನೆಲೆಗೊಂಡಿದೆ ಎನಿಸುತ್ತದೆ.

* * *

ಹಲವಾರು ಸಭೆ, ಸೆಮಿನಾರುಗಳಲ್ಲಿ ನಾವು ಒಟ್ಟಾಗಿಯೇ ಭಾಗವಹಿಸಿರುವುದುಂಟು. ಉದ್ವೇಗಕ್ಕೆಡೆಗೊಡದ ಅವರ ವಿಷಯ